# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 712 |
| ಸದಸ್ಯರ ಹೆಸರು | : | ಶ್ರೀ ಎಂ ನಾಗರಾಜು (ವಿಧಾನ ಸಭೆಯಿಂದ ಚುನಾಯಿತರು) |
| ಉತ್ತರಿಸಬೇಕಾದ ದಿನಾಂಕ | : | 13.12.2024 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಅಭಿವೃದ್ಧಿ ಮತ್ತು ಪ್ರಗತಿಯತ್ತ ಕೊಂಡೊಯ್ಯುವ ಹಾದಿಯಲ್ಲಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಪಾತ್ರ ಅತೀ ಮಹತ್ವವಾಗಿದ್ದು, ಸದರಿ ಇಲಾಖೆಯಿಂದ ಹಲವಾರು ಶಿಫಾರಸ್ಸುಗಳನ್ನು ರಾಜ್ಯಕ್ಕೆ ನೀಡಲು ಸಮಿತಿ ರಚಿಸಿದ್ದು, ಈ ಸಮಿತಿಯ ಅಧ್ಯಕ್ಷರು ಯಾರು ಮತ್ತು ಸದಸ್ಯರು ಯಾರು: | ಕರ್ನಾಟಕ ರಾಜ್ಯವನ್ನು ಅಭಿವೃದ್ದಿ ಪ್ರಗತಿಯತ್ತ ಕೊಂಡ್ಯೊಯಲು ರಾಜ್ಯ ಸರ್ಕಾರವು ನಿರ್ಧರಿಸಿದ್ದು, ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಸಮನವಾಗಿ ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸುವ ಸಲುವಾಗಿ ಶ್ರೀ. ಪ್ರೋ. ಗೋವಿಂದ ರಾವ್ ಆರ್ಥಿಕ ತಜ್ಞರು ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯನ್ನು ರಚಿಸಿ ದಿನಾಂಕ 16.03.2024ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ ಈ ಸಮಿತಿಗೆ ಸದಸ್ಯರುಗಳನ್ನಾಗಿ ಕೆಳಕಂಡವರನ್ನು ನೇಮಿಸಲಾಗಿರುತ್ತದೆ.<br>1. ಶ್ರೀಯುತ. ಎಲ್.ಕೆ ಅತೀಕ್<br>2. ಡಾ॥ ಸೂರ್ಯನಾರಾಯಣ ಎಂ.ಹೆಚ್.<br>3. ಡಾ॥ ಎಸ್.ಟಿ. ಬಾಗಲಕೋಟಿ<br>4. ಡಾ॥ ವಾಸುದೇವ್ ಸೇಡಂ ಹೆಚ್. |
| ಆ. | ಈ ಸಮಿತಿಯಿಂದ ರಾಜ್ಯದ ಪ್ರಗತಿಗಾಗಿ ಹಾಗೂ ನಾಗರೀಕರ ಹಿತರಕ್ಷಣೆಗಾಗಿ ಕಳೆದ 2 ವರ್ಷಗಳಿಂದ ನೀಡಲಾದ ಶಿಫಾರಸ್ಸು ಮತ್ತು ಸಲಹೆಗಳೇನು: (ಸಲಹಾ ಪಟ್ಟಿಯನ್ನು ಜಿಲ್ಲಾವಾರು ನೀಡುವುದು) | ಕರ್ನಾಟಕ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು 01.09.2024ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಸಮಿತಿಯು ಪ್ರಸ್ತುತ ಸೂಚ್ಯಂಕಗಳನ್ನು ಅಂತಿಮಗೊಳಿಸುವ ಕೆಲಸ ನಿರ್ವಹಿಸುತ್ತಿದ್ದು, ಮಾನ್ಯ ಸಚಿವರುಗಳು ಹಾಗೂ ಇತರೆ ಪ್ರಮುಖ ವ್ಯಕ್ತಿಗಳೊಂದಿಗೆ ಸಭೆ ನಡೆಸಿ ಅಭಿಪ್ರಾಯಗಳನ್ನು ಸಂಗ್ರಹಿಸಲು ಕ್ರಮವಹಿಸಲಾಗುತ್ತಿದೆ. |
| ಇ. | ಹಲವಾರು ವರ್ಷಗಳಿಂದ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ಯೋಜನೆಗಳಲ್ಲಿ ಪ್ರಾದೇಶಿಕ ಅಸಮತೋಲನೆ ಕಂಡುಬರುತ್ತದ್ದು. ಈ ಪ್ರದೇಶಿಕ ಅಸಮತೋಲನೆಯನ್ನು ನಿವಾರಿಸಲು ಕಳೆದ ಎರಡು ವರ್ಷಗಳಲ್ಲಿ ಸರ್ಕಾರಕ್ಕೆ ಸಮಿತಿಯಿಂದ ಮಾಡಲಾಗಿರುವ ಶಿಫಾರಸ್ಸುಗಳು ಏನು;<br>(ವಿವರವಾದ ಮಾಹಿತಿ ನೀಡುವುದು) | ಕರ್ನಾಟಕ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯು 01.09.2024ರಿಂದ ಕಾರ್ಯನಿರ್ವಹಿಸುತ್ತಿದ್ದು ಅಭಿವೃದ್ಧಿಗೆ ಪೂರಕವಾದ ಸೂಚ್ಯಂಕಗಳನ್ನು ಅಂತಿಮಗೊಳಿಸುವ ಬಗ್ಗೆ ಮಾನ್ಯ ಸಚಿವರುಗಳು ಹಾಗೂ ವಿವಿಧ ಕ್ಷೇತ್ರದ ಸಾಧಕರೊಂದಿಗೆ ಸಭೆ ನಡೆಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗುತ್ತಿದೆ. ಇನ್ನೂ ಯಾವುದೇ ಅಭಿಪ್ರಾಯಗಳನ್ನು/ಸಲಹೆ ಸೂಚನೆಗಳನ್ನು ಸರ್ಕಾರಕ್ಕೆ ನೀಡಿರುವುದಿಲ್ಲ. |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| ಈ. | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ದಿ ಮಂಡಳಿ ಅಡಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದಿಗಾಗಿ ಒತ್ತು ನೀಡಲು ರೂ.5,000 ಕೋಟಿ ಅನುದಾನವನ್ನು 2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ್ದು, ಈ ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ (ಮಾಹಿತಿ ನೀಡುವುದು) ಈ ಅನುದಾನದಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳಾವುದೆ: (ಕಲ್ಯಾಣ ಕರ್ನಾಟಕ ಜಿಲ್ಲಾವಾರು ಮಾಹಿತಿ ನೀಡುವುದು) | ಕಲ್ಯಾಣ ಕರ್ನಾಟಕ ಪ್ರದೇಶಾಬಿವೃದ್ಧಿ ಮಂಡಳಿಯಡಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಒತ್ತು ನೀಡಲು ರೂ 5000 ಕೋಟಿ ಅನುದಾನವನ್ನು 2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ್ದು, ಸದರಿ ಅನುದಾನಕ್ಕೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಅನುಮೋದನೆ ನೀಡಲಾಗುತ್ತಿದೆ (ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ)<br><br>ಸದರಿ ಅನುದಾನದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾವೃದ್ಧಿ ಮಂಡಳಿ ವತಿಯಿಂದ ಶಿಕ್ಷಣ, ಆರೋಗ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಲಯಗಳು ಮತ್ತು ಕೈಗಾರಿಕೆ, ಕೌಶಲ್ಯಾಭಿವೃದ್ಧಿ, ನೀರಾವರಿ, ಕುಡಿಯುವ ನೀರು, ರಸ್ತೆ ಮತ್ತು ಸಂಪರ್ಕ, ಅಂತರ್ಜಲ ಸಂರಕ್ಷಣೆ ಹಾಗೂ ಕೃಷಿ ಹಾಗೂ ಕೃಷಿಗೆ ಸಂಬಂಧಿತ ವಲಯಗಳಲ್ಲಿ ಅಭಿವೃದ್ದಿ ಅಂತರಗಳನ್ನು ಗುರುತಿಸಿ, ಆದ್ಯತೆಗನುಗುಣವಾಗಿ ಯೋಜನೆಗಳನ್ನು ರೂಪಿಸಿ, ಕಲ್ಯಾಣ ಕರ್ನಾಟಕ ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.<br><br>ಅನುಮೋದನೆ ನೀಡಿದ ಅನುದಾನದ ಹಾಗೂ ಕಾಮಗಾರಿಗಳ ಜಿಲ್ಲಾವಾರು ವಿವರವನ್ನು ಅನುಬಂಧ-2&3 ರಲ್ಲಿ ನೀಡಲಾಗಿದೆ. |
| ಉ | ರಾಜ್ಯದಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಸಮತೋಲನೆಯನ್ನು ಪರಿಹರಿಸಲು ದಿ: ಡಾ॥ ಡಿ.ಎಂ.ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ ಅನುದಾನ/ಹೂಡಿಕೆಗಳನ್ನು ರಾಜ್ಯ ಸರ್ಕಾರದ ವತಿಯಿಂದ ನೀಡಲಾಗಿದ್ದು, ಈ ಕ್ರಮಗಳಿಂದ ಆಗಿರುವ ಬದಲಾವಣೆಗಳು ಮತ್ತು ಅವುಗಳ ಪ್ರಭಾವವನ್ನು ಅಧ್ಯಯನ ಮಾಡಲು ಉನ್ನತ ಅಧಿಕಾರದ ಸಮಿತಿಯನ್ನು ರಚಿಸಲಾಗುವುದು ಎಂದು 2024-25ನೇ ಸಾಲನ ಆಯವ್ಯಯದಲ್ಲಿ ಘೋಷಿಸಿದ್ದು. ಈ ಸಮಿತಿಯನ್ನು ರಚಿಸಲಾಗಿದೆಯೇ: ರಚಿಸಿದ್ದಲಿ, ಈ ಸಮಿತಿಯು ಯಾರ ಅಧ್ಯಕ್ಷತೆಯಲ್ಲಿ ರಚನೆಯಾಗಿರುತ್ತದೆ: ಈ ಸಮಿತಿಯ ಸದಸ್ಯರು ಯಾರು ಮತ್ತು ಈ ಸಮಿತಿಯು ಇಲ್ಲಯವರೆಗೆ ಎಷ್ಟು ಸಭೆಗಳನ್ನು ಕೈಗೊಂಡಿದೆ ಹಾಗೂ ಈ ಸಮಿತಿಯ ಶಿಫಾರಸ್ಸುಗಳು ಎನು: ಇಲ್ಲವಾದಲ್ಲಿ. ವಿಳಂಬಕ್ಕೆ ಕಾರಣಗಳೇನು? | ದಿನಾಂಕ:01.09.2024ರಿಂದ ಕರ್ನಾಟಕ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯು ಕಾರ್ಯನಿರ್ವಹಿಸುತ್ತಿದ್ದು ಇವರೆವಿಗೂ ಸರ್ಕಾರಕ್ಕೆ ಯಾವುದೇ ಶಿಫಾರಸ್ಸು ಸಲ್ಲಿಸಿರುವುದಿಲ್ಲ. |

**ಪಿಡಿಎಸ್ 37 ಎಸ್‌ಡಿಪಿ 2024**

(ಡಿ. ಸುಧಾಕರ್)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

## ಅನುಬಂಧ-1

## 2024-25ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುಮೋದಿತ ಕ್ರಿಯಾಯೋಜನೆಯ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವಿವರ | ಶೇಕಡಾ | ಅನುದಾನ ಹಂಚಿಕೆ | ಎಸ್.ಸಿ.ಪಿ | ಟಿ.ಎಸ್.ಪಿ | ಸಾಮಾನ್ಯ | ಒಟ್ಟು | ಮಂಡಳಿಯಿಂದ ಸ್ವೀಕೃತವಾದ ಕ್ರಿಯಾ ಯೋಜನೆ | ಬಾಕಿ (8-9) |
|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** |
| 1 | ಮೈಕ್ರೋ [65%] | 86% | 322500.00 | 45442.17 | 18934.35 | 145248.48 | 209625.00 | 130357.16 | 79267.84 |
| 2 | ಮ್ಯಾಕ್ರೋ [35%] | | | 24468.86 | 10195.42 | 78210.72 | 112875.00 | 50043.25 | 62831.75 |
| 3 | ಪ್ರಾದೇಶಿಕ ನಿಧಿ [RF] | 4% | 15000.00 | 3214.30 | 1339.30 | 10446.40 | 15000.00 | 1633.22 | 13366.78 |
| 4 | ಅಧ್ಯಕ್ಷರ ವಿವೇಚನಾ ನಿಧಿ [CDQ] | 3% | 15000.00 | 3214.30 | 1339.30 | 10446.40 | 15000.00 | 8350.00 | 2900.00 |
| 5 | ಆಡಳಿತ ವೆಚ್ಚ | 1% | 3750.00 | 0.00 | 0.00 | 3750.00 | 3750.00 | 3750.00 | 0.00 |
| 6 | ರಾಜ್ಯ ವಲಯ ಕಾರ್ಯಕ್ರಮಗಳಿಗೆ | | 88750.00 | 19019.00 | 7925.00 | 61806.00 | 88750.00 | 9540.00 | 79210.00 |
| **ಒಟ್ಟು(a)** | | | **445000.00** | **95358.63** | **39733.37** | **309908.00** | **445000.00** | **203673.63** | **237576.37** |
| | | | | | | | | | |
| 7 | ಘನತೆವೆತ್ತ ರಾಜ್ಯಪಾಲರು ಉನ್ನತ ಶಿಕ್ಷಣ ವಲಯಕ್ಕೆ ಸಂಬಂಧಿಸಿದಂತೆ ಸೂಚಿಸಿರುವ ಕಾರ್ಯಕ್ರಮಗಳಿಗೆ | | 25000.00 | 5358.00 | 2233.00 | 17410.00 | 25000.00 | 25000.00 | 0.00 |
| 8 | ಮಾನ್ಯ ಮುಖ್ಯಮಂತ್ರಿಯವರ ವಿವೇಚನಾ ನಿಧಿ | 3% | 15000.00 | 3214.30 | 1339.30 | 10446.40 | 15000.00 | 15000.00 | 0.00 |
| 9 | ಸರ್ಕಾರದ ವಿವೇಚನಾ ನಿಧಿ | 3% | 15000.00 | 3214.30 | 1339.30 | 10446.40 | 15000.00 | 15000.00 | 0.00 |
| **ಒಟ್ಟು(b)** | | | **55000.00** | **11786.60** | **4911.60** | **38302.80** | **55000.00** | **55000.00** | **0.00** |
| **ಮಹಾ ಒಟ್ಟು (a+b)** | | | **500000.00** | **107145.23** | **44644.97** | **348210.8** | **500000** | **258673.63** | **237576.37** |

ನಿರ್ದೇಶಕರು
ಎ.ಡಿ.ಬಿ.ವಿಭಾಗ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಅನುಬಂಧ–2

(ರೂ ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆಗಳು | ಮೈಕ್ರೋ | | ಮ್ಯಾಕ್ರೋ | | ಮೈಕ್ರೋ ಮತ್ತು ಮ್ಯಾಕ್ರೋ ಒಟ್ಟು | |
|---|---|---|---|---|---|---|---|
| | | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ |
| 1 | ಬೀದರ್ | 40 | 6137.28 | 0 | 0 | 40 | 6137.28 |
| 2 | ಕಲಬುರಗಿ | 198 | 23800.67 | 0 | 0 | 198 | 23800.67 |
| 3 | ಯಾದಗಿರಿ | 145 | 10012.26 | 74 | 9415.05 | 219 | 19427.31 |
| 4 | ರಾಯಚೂರು | 282 | 22068.49 | 126 | 9534.13 | 408 | 31602.62 |
| 5 | ಕೊಪ್ಪಳ | 79 | 7652.36 | 65 | 6743.26 | 144 | 14395.62 |
| 6 | ಬಳ್ಳಾರಿ | 160 | 8837.34 | 0 | 0 | 160 | 8837.34 |
| 7 | ವಿಜಯನಗರ | 156 | 13564.43 | 27 | 8182.56 | 183 | 21746.99 |
| 8 | ಪ್ರಾದೇಶಿಕ ನಿಧಿ(RF) | | | | | 4 | 1374.37 |
| 9 | ಆಡಳಿತಾತ್ಮಕ ವೆಚ್ಚ | | | | | | 3750.00 |
| | ಒಟ್ಟು | **1060** | **92072.83** | **292** | **33875** | **1356** | **131072.20** |

ನಿರ್ದೇಶಕರು,
ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ

ಅನುಬಂಧ–3

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ | ಮೈಕ್ರೋ | | ಮ್ಯಾಕ್ರೋ | | ಒಟ್ಟು | |
|---|---|---|---|---|---|---|---|
| | | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ |
| 1 | ಬೀದರ್ | 167 | 7799.61 | 11 | 4170.8 | 178 | 11970.41 |
| 2 | ಕಲಬುರಗಿ | 91 | 4331.09 | 0 | 0 | 91 | 4331.09 |
| 3 | ಯಾದಗಿರಿ | 61 | 3586.86 | 1 | 100 | 62 | 3686.86 |
| 4 | ರಾಯಚೂರು | 118 | 9501.96 | 35 | 2427.55 | 153 | 11929.51 |
| 5 | ಕೊಪ್ಪಳ | 165 | 9674.29 | 23 | 2510.67 | 188 | 12184.96 |
| 6 | ಬಳ್ಳಾರಿ | 0 | 0 | 33 | 3706.07 | 33 | 3706.07 |
| 7 | ವಿಜಯನಗರ | 22 | 3390.52 | 19 | 3253.16 | 41 | 6643.68 |
| 8 | ಅಧ್ಯಕ್ಷರ ವಿವೇಚನಾ ನಿಧಿ | | | | | 30 | 8350 |
| 9 | ಪ್ರಾದೇಶಿಕ ನಿಧಿ | | | | | 3 | 258.85 |
| 9 | ಬಜೇಟ್ ಪ್ಯಾರಾ | | | | | 16 | 9540.00 |
| ಒಟ್ಟು | | **624** | **38284.33** | **122** | **16168.25** | **795** | **72601.430** |

ನಿರ್ದೇಶಕರು,
ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ